K.P.T.C.L. ಹೆಸರು ಬದಲಾವಣೆ

3218 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರುಪ್ಪ (ಧಾರವಾಡ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಪಿ.ಟಿ.ಸಿ.ಎಲ್. ಎಂದಿನಿಂದ ಪರಿವರ್ತನೆಯಾಗಿರುವುದು?*

ಆ) *ರಾಜ್ಯದ ವಿದ್ಯುತ್ ಉತ್ಪಾದನೆಯಲ್ಲಿ ಜಲ, ಥರ್ಮಲ್ ಮತ್ತು ಗಾಳಿ ವಿದ್ಯುತ್ ಉತ್ಪಾದನೆಗಳ ಪೂರ್ಣ ವಿವರ ನೀಡುವುದು?*

ಇ) *ನಮ್ಮ ಮೇಲಿನ ವಿದ್ಯುತ್ ಉತ್ಪಾದನೆಯಲ್ಲಿ ಒಟ್ಟು ಸರಬರಾಜು ಮೂಲಕ ವಿತರಣೆ ಮಾಡುವ ವಿವಿಧ ಬಗೆಯಿಂದ ಖರ್ಚು ಆಗುವ ವಿದ್ಯುತ್ ಎಷ್ಟು?*

ಈ) *ವಿದ್ಯುಚ್ಛಕ್ತಿಯ ಒಟ್ಟು ಉತ್ಪಾದನೆಯಲ್ಲಿ ಸರಬರಾಜಿನ ಟ್ರಾನ್ಸ್‌ಮಿಷನ್‌ನಲ್ಲಿಯ ಹಾನಿ ಮತ್ತು ಕಳವು ಆಗುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಸರ್ಕಾರಿ ಆಜ್ಞೆ ಸಂಖ್ಯೆ ಡಿಇ 4 ಪಿಎಸ್‌ಆರ್ 99, ಬೆಂಗಳೂರು ದಿನಾಂಕ: 16-7-99ರ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಆಗಿ ದಿನಾಂಕ: 1-8-1999 ರಂದು ಪರಿವರ್ತನೆಯಾಗಿರುತ್ತದೆ.

ಆ) 1999-2000ದ ಸಾಲಿನಲ್ಲಿ ರಾಜ್ಯದಲ್ಲಿ ವಿವಿಧ ಮೂಲಗಳಿಂದ ಅಂದರೆ ಜಲ, ಥರ್ಮಲ್, ಗಾಳಿ ಮತ್ತು ಕೋಜನರೇಷನ್ ಇವುಗಳಿಂದ ಉತ್ಪಾದಿಸಲ್ಪಟ್ಟ ವಿದ್ಯುತ್ ಪ್ರಮಾಣದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ಉತ್ಪಾದನೆಯಾದ ಒಟ್ಟು ವಿದ್ಯುತ್ ಈ ಕೆಳಕಂಡಂತೆ ಖರ್ಚಾಗುತ್ತಿದೆ.

		1999-2000ನೇ ಸಾಲಿನಲ್ಲಿ ಖರ್ಚಾದ ವಿದ್ಯುತ್ ದಶಲಕ್ಷ (ಬಳಕೆಯಾದ) ಯೂನಿಟ್‌ಗಳಲ್ಲಿ
1.	ಗೃಹ ಬಳಕೆ ದೀಪಗಳು	1,516
2.	ಸರ್ವ ವಿದ್ಯುತ್ ಗೃಹ ಬಳಕೆ	1,787
3.	ವಾಣಿಜ್ಯ ದೀಪಗಳು	531
4.	ನೀರಾವರಿ ಪಂಪ್‌ಸೆಟ್‌ಗಳು	6,309
5.	ಎಲ್.ಟಿ. ನೀರು ಸರಬರಾಜು	296
6.	ಎಲ್.ಟಿ. ಕೈಗಾರಿಕೆ	1,278

1	2	3
7.	ಬೀದಿ ದೀಪಗಳು	432
8.	ಭಾಗ್ಯಜ್ಯೋತಿ: ಕುಟೀರ ಜ್ಯೋತಿ	332
9.	ಹೆಚ್.ಟಿ. ನೀರು ಸರಬರಾಜು	593
10.	ಹೆಚ್.ಟಿ. ಕೈಗಾರಿಕೆ	2,217
11.	ಹೆಚ್.ಟಿ. ವಾಣಿಜ್ಯ ಸ್ಥಾವರಗಳು	349
12.	ಹೆಚ್.ಟಿ. ಏತ ನೀರಾವರಿ	49
13.	ಹೆಚ್.ಟಿ. ಹುಕ್ಕೇರಿ ಸೊಸೈಟಿ	130
14.	ಹೆಚ್.ಟಿ. ರೈಲ್ವೇ ಟ್ರ್ಯಾಕ್ಷನ್	28
15.	ಹೆಚ್.ಟಿ ಅಪಾರ್ಟ್‌ಮೆಂಟ್ ಕಾಲೋನಿ	43
16.	ಇತರೆ (ತಾತ್ಕಾಲಿಕ, ಎಂ.ಯು. ಎಸ್.ಎಸ್. ಬಳಕೆ)	255
	ಒಟ್ಟು	**16,145**

ಈ) ಸರಬರಾಜಿನ ವಿತರಣೆಯಲ್ಲಿಯ ಹಾನಿಯು ಶೇಕಡ 32.69 (8538 ದಶಲಕ್ಷ ಯೂನಿಟ್‌ಗಳು) ಇರುತ್ತದೆ. ಇದು ಇಹೆಚ್‌ವಿ ಲೈನು, ಹೆಚ್.ಟಿ. ಲೈನು, ಎಲ್.ಟಿ. ಲೈನುಗಳಲ್ಲಿ ಮತ್ತು ವಿದ್ಯುತ್ ಪರಿವರ್ತಕ ಕೇಂದ್ರಗಳಲ್ಲಿ ಉಂಟಾಗುವ ವಿದ್ಯುತ್ ನಷ್ಟವನ್ನು ಒಳಗೊಂಡಿರುತ್ತದೆ. ವಿದ್ಯುತ್ ಕಳವು ಮತ್ತು ಇತರೆ ಕಾರಣಗಳಿಂದ ಅಂದರೆ ಕೆಟ್ಟು ಹೋದ ವಿದ್ಯುತ್ ಮಾಪಕದ ಬಾಬ್ತು ಅಕ್ರಮವಾಗಿ ನೀರಾವರಿ ಪಂಪುಸೆಟ್‌ಗಳನ್ನು ಉಪಯೋಗ ಮಾಡುತ್ತಿರುವುದರಿಂದ ಬಳಕೆಯಾಗುತ್ತಿರುವ ವಿದ್ಯುತ್ ಇವುಗಳಿಂದ ಶೇಕಡ 5.31 (1387 ದಶಲಕ್ಷ ಯೂನಿಟ್‌ಗಳು) ಇರುತ್ತದೆ.

ರಾಜ್ಯದಲ್ಲಿ 1999-2000 ವರ್ಷದಲ್ಲಿ ವಿವಿಧ ಮೂಲಗಳಿಂದ ಉತ್ಪಾದನೆ ಮಾಡಲಾದ ವಿದ್ಯುತ್ ಪ್ರಮಾಣದ ವಿವರಗಳು

(ದಶಲಕ್ಷ ಯೂನಿಟ್ಸುಗಳಲ್ಲಿ)

ಕ್ರಮ ಸಂಖ್ಯೆ	ವಿದ್ಯುತ್ ಮೂಲ	ಅನುಬಂಧ			
		ಕರ್ನಾಟಕ ವಿದ್ಯುತ್ ನಿಗಮ	ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ	ಖಾಸಗೀ ಕ್ಷೇತ್ರ	ಒಟ್ಟು
1.	ಜಲ ವಿದ್ಯುತ್	11,684.0	425.0	212.7	12,321.7
2.	ಶಾಖೋತ್ಪನ್ನ ವಿದ್ಯುತ್	7,141.0	687.0	232.7	8,060.7
3.	ಗಾಳಿ ಆಧಾರಿತ ವಿದ್ಯುತ್	4.7	-	34.2	38.9
4.	ಕೋಜನರೇಷನ್	-	-	91.7	91.7
	ಒಟ್ಟು	**18,829.7**	**1,112.0**	**571.3**	**20,513.0**